

# ಸಮಯ ಪಾಲಕ

**ಹಳೆ ಕಾಲದ ನೆನಪುಗಳನ್ನು ಮೆಲುಕು ಹಾಕುತ್ತಿರುವಂತೆ ಕಾಣುವ ಸಾಲುಸಾಲು ಗಡಿಯಾರಗಳು, ಸುಂದರವಾದ ಕಂಚು, ಹಿತ್ತಾಳೆ ಪಾತ್ರೆ, ಚಿಮಣಿ ದೀಪಗಳು ಶಶಿಭಟ್ ಅವರ ಸಂಗ್ರಹದಲ್ಲಿವೆ.**

■ ಅಕ್ಷಯ್ ಕುಮಾರ್

'ಹಳೆಯ, ಪುರಾತನ ವಸ್ತುಗಳೆಂದರೆ ನನಗೆ ಒಲವು ಜಾಸ್ತಿ. ಅದರಲ್ಲೂ ಹಳೇ ಕಾಲದ ಗಡಿಯಾರಗಳು ಕಣ್ಣಿಗೆ ಬಿದ್ದರಂತೂ ಅವನ್ನು ಹೇಗಾದರೂ ಮಾಡಿ ನನ್ನ ಮನೆಗೆ ತಂದುಬಿಡುತ್ತೇನೆ.' ವಿಟ್ಲದ ಪಡ್ನೂರು ಗ್ರಾಮದ ಪಡಾರು ಶಶಿಭಟ್ ಅವರ ಈ ಮಾತಿನಲ್ಲೇ ಗಡಿಯಾರಗಳ ಮೇಲಿನ ಅವರ ಪ್ರೀತಿ ಎದ್ದುಕಾಣುತ್ತಿತ್ತು.

ಶಶಿಭಟ್ ಅವರ ಮನೆಗೆ ಬಂದವರನ್ನು ಗಡಿಯಾರಗಳ ಟಿಕ್ ಟಿಕ್ ಶಬ್ದ ಸ್ವಾಗತಿಸುತ್ತದೆ. ಮನೆಯ ಮೂಲೆಯಲ್ಲಿ ಗಾಂಭೀರ್ಯದಿಂದ ನಿಂತಂತೆ ಕಾಣುವ ಆಳೆತ್ತರದ ಗಡಿಯಾರಗಳು, ಗೋಡೆ ಮೇಲಿನ ಸಾಲುಸಾಲು ಗಡಿಯಾರಗಳು ಒಂದೇ ಕ್ಷಣದಲ್ಲಿ ಗಮನ ಸೆಳೆಯಬಲ್ಲವು.

90 ವರ್ಷಗಳಿಗೂ ಹಳೆಯದಾದ ಗಡಿಯಾರಗಳ ಸಂಗ್ರಹ ಇವರ ಬಳಿಯಿದೆ. ಅಮೆರಿಕದ ಅನ್ಸೋನಿಯಾ ಕಂಪೆನಿ, ಜಪಾನಿನ ಸೀಕೋಶಾ, ಜರ್ಮನಿಯ ವೆಸ್ಟರ್ನ್ ವಾಚ್, ಜಂಗ್‌ಹಾನ್ಸ್, GB, ಹಾಲೆಂಡ್, ಸ್ವಿಟ್ಜರ್ಲೆಂಡ್ ಮತ್ತು ದೇಶೀಯ ಮಾಸ್ಟರ್, ಸೈಂಟಿಫಿಕ್ ಕಂಪೆನಿಯ ಗಡಿಯಾರಗಳು ಸೇರಿದಂತೆ 120ಕ್ಕೂ ಅಧಿಕ ಗಡಿಯಾರಗಳಿವೆ. ಈ ಎಲ್ಲಾ ಗಡಿಯಾರಗಳು ಇಂದಿಗೂ ಕಾರ್ಯನಿರ್ವಹಿಸುತ್ತಿವೆ.

ಕೆಲವು ಗಡಿಯಾರಗಳು ತೂಕದ ಸಹಾಯದಿಂದ, ಇನ್ನೂ ಕೆಲವು ಕೀ ಕೊಡುವ ಮೂಲಕ ಕೆಲಸ ಮಾಡುತ್ತಿವೆ. 8, 14, 21 ಮತ್ತು 30 ದಿನಗಳಿಗೆ ಕೀ ನೀಡಿ ಕೆಲಸ ಮಾಡುವ 'ಚೈಮಿಂಗ್' (Chiming) ಹಾಗೂ 'ಕ್ವಾರ್ಟರ್ ಚೈಮಿಂಗ್' (Quarter chiming) ಗಡಿಯಾರಗಳು ಜಾಗ ಪಡೆದುಕೊಂಡಿವೆ.

ಜಪಾನ್ ನಿರ್ಮಿತ 'ಗ್ರ್ಯಾಂಡ್‌ಫಾದರ್ 2 ವೆಯಿಟ್' (Grandfather 2 weight) ಮತ್ತು ಜರ್ಮನಿ ನಿರ್ಮಿತ 'ಗ್ರ್ಯಾಂಡ್‌ಮದರ್ 3 ವೆಯಿಟ್' (Grandmother 3 weight) ಗಡಿಯಾರವಿದೆ. 7 ಅಡಿ ಎತ್ತರದ ಗಡಿಯಾರವನ್ನು 'ಗ್ರ್ಯಾಂಡ್‌ಫಾದರ್' ಮತ್ತು 5.5 ಅಡಿ ಎತ್ತರದ ಗಡಿಯಾರವನ್ನು 'ಗ್ರ್ಯಾಂಡ್‌ಮದರ್' ಗಡಿಯಾರ ಎಂದು ಕರೆಯುತ್ತಾರೆ. ಇವು ತೂಕದ ಸಹಾಯದಿಂದ ಕೆಲಸ ಮಾಡುತ್ತವೆ ಎಂಬುದು ವಿಶೇಷ.

ಗಡಿಯಾರಗಳೊಂದಿಗೆ, ಒಂದು ಶತಮಾನಕ್ಕೂ ಹೆಚ್ಚು ಹಳೆಯದಾದ ಕಲಾಕೃತಿಗಳು, ತಾಮ್ರದ ಪಾತ್ರೆಗಳು, ದೀಪದ ಕಂಬಗಳನ್ನೂ ಸಂಗ್ರಹಿಸಿದ್ದಾರೆ. ನೂರಕ್ಕೂ ಹೆಚ್ಚು ಚಿಮಣಿ ದೀಪಗಳು ಇವರ ಬಳಿಯಿವೆ. ಹಿತ್ತಾಳೆಯ ಚಿಮಣಿ ದೀಪಗಳು ಪ್ರಾಚೀನ ಕಾಲದ ವೈಭವಕ್ಕೆ ಸಾಕ್ಷಿಯಂತಿವೆ. ಇವುಗಳೊಂದಿಗೆ, ವಿವಿಧ ರಾಜ್ಯಗಳ ಅಕ್ಕಿ ಅಳತೆ ಮಾಪಕಗಳು ಮತ್ತು ನೇಗಿಲು ಸೇರಿದಂತೆ ಇತರ ಮರದ ಉಪಕರಣಗಳೂ ಇವೆ. ತುಳುನಾಡಿನ ಸಾಂಪ್ರದಾಯಿಕ ಚಿಮಣಿ ದೀಪ ಇವರ ಸಂಗ್ರಹದಲ್ಲಿ ಅತ್ಯಂತ ಹಳೆಯದು.

ಇವುಗಳೊಂದಿಗೆ, ಹಳೆಯ ಗ್ರಾಮಾಫೋನ್, ಗೆಳೆಯನಿಂದ ಪಡೆದುಕೊಂಡ 90 ವರ್ಷ ಹಳೆಯ ಪಿಯಾನೊವನ್ನು ಪ್ರೀತಿಯಿಂದ ಕಾಪಾಡಿಟ್ಟುಕೊಂಡಿದ್ದಾರೆ. ಇಂಥ ಇನ್ನಷ್ಟು ಪುರಾತನ ಸಾಮಗ್ರಿಗಳನ್ನು ಸಂಗ್ರಹಿಸಿ ಪುಟ್ಟ ಮ್ಯೂಸಿಯಂ ರೂಪಿಸುವ ಮನಸ್ಸು ಶಶಿ ಭಟ್ ಅವರದ್ದು.

ಪ್ರತಿಕ್ರಿಯಿಸಿ: feedback@sudha.co.in



